SATYAVADI Founded 1917 Regd. No. M 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂವತ್ಸರ 29 ಸಂಚಿಕೆ 12 ಗುರುವಾರ 28—3—46 [ಬಿಡಿ ಪ್ರತಿ 3 ಪೈ

ಜಪಾನಿನಲ್ಲೂ ಅಕ್ಕಿಯ ಭೀಕರ ತುಟ್ಟಿ

ಅನ್ನವಿಲ್ಲದೆ ನರಳುವ ಸುಮಾರು 23 ರಾಷ್ಟ್ರಗಳು ಈಗ ಪ್ರಪಂಚದಲ್ಲಿ ದೊರೆಯುವ ಧನಸಗಳ ಪೈಕಿ ಅರ್ಧ ಭಾಗ ಕೋರುತ್ತಿವೆ. ಈ ಪೈಕಿ ಅತ್ಯಧಿಕ ಅಂಶವನ್ನು ಕೋರುವ ರಾಷ್ಟ್ರವೆಂದರೆ ಜಪಾನು. ಜಪಾನಿನಲ್ಲಿ ಉಂಟಾಗಲಿರುವ ಭೀಕರ ಕ್ಷಾಮವನ್ನು ಪರಿಹರಿಸಲು ಕನಿಷ್ಟ ಪಕ್ಷಕ್ಕೆ 6 ಲಕ್ಷ 25 ಸಹಸ್ರ ಟನ್ ಅಕ್ಕಿಯಾದರೂ ಕಳಿಸಬೇಕು ಎಂದು ಪ್ರಧಾನ ಸೇನಾನಿ ಜನರಲ್ ಮೆಕ್ ಆರ್ಥರರು ಕೇಳಿಕೊಂಡಿದ್ದಾರೆ

ಂ ಂ

ಭಾರತ ಸಮಸ್ಯೆ

ಭಾರತ ಸಮಸ್ಯೆಯನ್ನು ಸರಿಯಾಗಿ ಪರಿಷ್ಕರಿಸಿದೆ ಸ್ಟ್ರಾಫರ್ಡ್ ಕ್ರಿಪ್ಸ್ ಯೋಜನೆಗಳನ್ನು ಹಾಕುತ್ತಿರಲು ಸಾಧ್ಯವಿಲ್ಲ. 25 ವರ್ಷಗಳ ಹಿಂದೆ ಮುಸ್ಲಿಂ ಲೀಗ್ ಇರಲಿಲ್ಲ. ಕಮ್ಯೂನಿಸ್ಟ್ ಪಾರ್ಟಿ ಇದ್ದೇ ಇರಲಿಲ್ಲ. ಆ ಕಾಲದಲ್ಲಿ ಯಾವ ಬ್ರಿಟಿಷ್ ಪ್ರಧಾನ ಮಂತ್ರಿಯಾಗಲೀ, ವೈಸರಾಯರಾಗಲೀ ಒಂದು ದಾರಿಯನ್ನು ಕಂಡು ಹಿಡಿದಿದ್ದಲ್ಲಿ ಭಾರತ ಸಮಸ್ಯೆಯು ಸಕ್ರಮವಾಗಿ ಶಾಂತಿಯುತವಾಗಿ ಪರಿಷ್ಕಾರವಾಗುತ್ತಿತ್ತು. ಈಗ ಹಾಗೆ ಮಾಡಲು ಅವಕಾಶವು ಕಾಣಬರುತ್ತಿಲ್ಲ ಸಂದರ್ಭಗಳು ಇನ್ನೂ ಗಲಾಚಿಗಳು ನಡೆಗುವಂತೆ ಕಾಣಬರುತ್ತಿವೆ, ಎಂದ ಭಾರತ ಸಮಸ್ಯೆ ಕುರಿತು ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನು ಪ

ಂ ಂ

ಪೋಸ್ಟು ಕಾರ್ಡು, ದೀಪದಕಡ್ಡಿ ಬೆಲೆ ತಗ್ಗುವುದು

ಜುಲೈ 2 ರಿಂದ ಪೋಸ್ಟು ಕಾರ್ಡಿನ ಬೆಲೆ 6 ಕಾಸಿಗೂ, ದೀಪದಕಡ್ಡಿ ಪೆಟ್ಟಿಗೆ ದರ 6 ಕಾಸಿಗೂ ಇಳಿಸುವ ಮಸೂದೆಗೆ ಕೇಂದ್ರ ಶಾಸನ ಸಭೆಯಲ್ಲಿ ಅಂಗೀಕಾರ ದೊರೆತಿದೆ.

ಂ ಂ

ಮಂತ್ರಿಮಂಡಲ ನಿಯೋಗದೊಡನೆ ವೈಸರಾಯಿ ಮುಂ. ಮಂ. ಸದಸ್ಯರು

ಸವದೆಹಲಿ ಮಾ 26— ಮಂತ್ರಿ ಮಂಡಲದ ನಿಯೋಗದೊಡನೆ ವೈಸರಾಯಿ ಮಂತ್ರಿಮಂಡಲ ಸದಸ್ಯರು ಮಾತುಕತೆ ನಡೆಸಿ, ಹೊಸದಾಗಿ ತಾತ್ಕಾಲಿಕ ಸರಕಾರ ಸ್ಥಾಪನೆಯಾಗಲು ಸುಲಭವಾಗುವಂತೆ ಮಾಡಲು ತಾವು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಲು ಸಿದ್ಧರಾಗಿರುವುದಾಗಿ ತಿಳಿಸಿದರು.

ಪೋಸುಕಾರ್ಡು, ದೀಪದ ಕಡ್ಡಿ ಪೆಟ್ಟಿಗೆ ಬೆಲೆ ಇಳಿಯುವುದು

ವಿವಿಧ ವರ್ತಮಾನ

ಲಂಡನ್ ಮಾ— 26— ಯೂರೋಪಿನಲ್ಲಿಯ ಆಹಾರ ದುಸ್ಥಿತಿಯನ್ನು ತಪ್ಪಿಸಲು ಮುಂದಿನ ವಾರ 27 ಯೂರೋಪಿಯನ್ ರಾಷ್ಟ್ರಗಳ ಪ್ರತಿನಿಧಿಗಳ ಸಮ್ಮೇಳನ ನಡೆಯುವುದು

ಲಂಡನ್ ಮಾ 25— ಭಾರತವು ಸ್ವತಂತ್ರ ರಾಜ್ಯವಾಗಿಯಾಗಲೀ, ಬ್ರಿಟಿಷ್ ಸಾಂರಾಜ್ಯಾಂತರ್ಗತ ರಾಜ್ಯವಾಗಿ ಆಗಲೀ ಆದನಂತರ, ಬ್ರಿಟಿಷ್ ರಾಜರು ಮುಂದೆ ಭಾರತ ಚಕ್ರವರ್ತಿಗಳು ಎನ್ನಿಸಿಕೊಳ್ಳುವುದು ತಪ್ಪಬಹುದೆಂದು ಹೇಳಲಾಗಿದೆ.

ಕ್ವೆಟ್ಟಾ ಮಾ 25— ವೈಸರಾಯರ ಆಳಿಯಂದಿರಾದ ಮೆ || ಆಸ್ಲೇಯವರ ಸಾವಿನ ಸಂಬಂಧದಲ್ಲಿ ಅವರ ಮೋಟಾರು ಸೈಕಲ್ಲಿಗೆ ತಗುಲಿದ ಟ್ಯಾಕ್ಸಿಯ ಡ್ರೈವರಿನ ಮೇಲೆ ಮೊಖದ್ದಮೆ ಹೂಡಲಾಗಿದೆ.

ಬೆಂಗಳೂರು ಮಾ 25— ಕಾನಕಾನಹಳ್ಳಿಯ ಕಂಟ್ರಾಕ್ಟರು ಸಯದ್ ಹೈದರ್ ಸೇಟರ 3 ನೇ ಹೆಂಡತಿಯ ಶವವನ್ನು, ಅಕೆಯ ಸಾವಿನ ವಿಷಯದಲ್ಲಿ ಅನುಮಾನ ಉಂಟಾಗಿ ಡಿ || ಮ್ಯಾಜಿಸ್ಟ್ರೇಟರು ಭಾರಿ ಪೋಲೀಸು ಪಹರೆಯೊಂದಿಗೆ, ಈಚೆಗೆ ತೆಗೆಸಿದರು. ಪೋಲೀಸರ ತನಿಖೆ ನಡೆಯುತ್ತಿದೆ

ಲಾಹೋರು ಮಾ 24— ಪಂಜಾಬು ವಿಶ್ವವಿದ್ಯಾಸಿಲಯದವರು ಎಂ. ಎ. ಎಂ. ಎಸ್ಸಿ ಪರೀಕ್ಷೆಯನ್ನು ಎರಡನೆ ಸಾರಿ ನಡೆಸಲು ತೀರ್ಮಾನಿಸಿದ್ದರಿಂದ ಈ ಬಗ್ಗೆ ಆಮರಣಾಂತ ಉಪವಾಸವನ್ನು ಚಂಸಲು ತೊಡಗಿದ್ದ ವಿದ್ಯಾರ್ಥಿಗಳು ಉಪವಾಸ ನಿಲ್ಲಿಸಿದರು.

ಬೆಂಗಳೂರಿನಲ್ಲಿ ತಾ || 26 ರಲ್ಲಿ ನಡೆದ ಜಿಲ್ಲಾ ಸಮ್ಮೇಳನದಲ್ಲಿ ಸಂಸ್ಥಾನದ ಮುಜರಾಯಿ ದೇವಸ್ಥಾನಗಳಿಗೆ ಹರಿಜನರ ಪ್ರವೇಶ ದೊರೆಯುವಂತೆ ಮಾಡಬೇಕೆಂದು ಸಂಕಲ್ಪವನ್ನು ಪ್ರಾರ್ಥಿಸುವ ಠರಾವು ಮಂಜೂರಾಯಿತು.

ಟೋಕಿಯೋ ಮಾ 26 ಜ || ಟೋಜೋನಿನ ಜ್ಞಾಪಕಶಕ್ತಿ ತಗ್ಗುತ್ತಿರುವುದೆಂದು ಹೇಳಲಾಗಿದೆ

ಜಬ್ಬಲ್ಪುರ ಮಾ 26— ಇಲ್ಲಿ ನಡೆದ ಮುಷ್ಕರದ ಸಂಬಂಧವಾಗಿ 28 ಮಂದಿ ಸಿಪಾಯಿಗಳು ಕೆಲಸದಿಂದ ವಜಾ ಮಾಡಲ್ಪಟ್ಟರು.

ಇಂಡೋಡು ಮಾ 27— ರಾಂಜಿ ಪಂಥದಲ್ಲಿ ಹೋಳಿ ರು ಒರೋಡಾದವರನ್ನು ಟೀಸೋಲಿಸಿ, ಕ್ರಿಕೆಟ ಛಾಂಪಿಯನ್‌ಷಿಪ್ಪನ್ನು ಪಡೆದರು.

ಮೈಸೂರು ಮಾ 28— ಮೈಸೂರು ನಗರದ ನರಿಮಲ್ಲಪ್ಪ ಹೈ ಸ್ಕೂಲು ಕೇಂದ್ರದಲ್ಲಿ, ಆ ಸ್ಕೂಲಿನ ಶ್ರೀನಿವಾಸ ಎಂಬ ವಿದ್ಯಾರ್ಥಿಯು ನಿನ್ನೆ ನಡೆದ ಗಣಿತ ಪರೀಕ್ಷೆಯಲ್ಲಿ ಬರೆದು ತಂದಿದ್ದುದರಿಂದ ಕಾಪಿ ಮಾಡಲು ಪ್ರಯತ್ನಿಸಿದನೆಂದು ಡಿಬಾರ್ ಮಾಡಲ್ಪಟ್ಟರುವುದಾಗಿ ತಿಳಿಯಬಂದಿದೆ.

ಮೈಸೂರು ಮಾ 28 ಮೈಸೂರಿನ ಸುಪ್ರಸಿದ್ಧ ಪತ್ರಿಕೋದ್ಯೋಗಿಗಳಾಗಿದ್ದ ಈಚೆಗೆ ಕೆಲಕಾಲದಿಂದ ಬೊಂಬಾಯಿನ ಫ್ರೀ ಪ್ರೆಸ್ ಜರ್ನಲ್ ಆಫೀಸಿನಲ್ಲಿ ಕೆಲಸ ಮಾಡುತ್ತಿದ ಶ್ರೀ ಶೇಷಭಟ್ಟರು ಬೊಂಬಾಯಿನಲ್ಲಿ ಮೊನ್ನೆ ನಿಧನರಾದರೆಂದು ತಿಳಿಯಬಂದಿದೆ.

ಮುಷ್ಕರಗಳಿಗೆ

ಎರಡನೆಯ ಪ್ರಪಂಚ ಯುದ್ಧವು ಬಾರದಂತೆ ಮೊದಲನೇ ಪ್ರಪಂಚ ಯುದ್ಧವು ನಡೆಯಿತೆಂದು ಅಂದುಕೊಳ್ಳುತ್ತಿದ್ದರು. ಮೂರನೇ ಪ್ರಪಂಚ ಯುದ್ಧವು ನಡೆಯದಿರುವರಂತೆ ಎಂಡನೆಯ ಪ್ರಪಂಚ ಯುದ್ಧವು ನಡೆಯುತೆಂದು ಅಂದುಕೊಳ್ಳುತ್ತಿರುವರು. ಮೂರನೆಯ ಪ್ರಪಂಚ ಮಹಾಯುದ್ಧವು ಖಂಡಿತವೆಂದು ಅನೇಕ ಬಲ್ಲವರು ಹೇಳುತ್ತಿರುವರು ಹೇಳುವರು ನಾತ್ರವೇ ಅಲ್ಲದೆ ಮುಹೂರ್ತವನ್ನು ಕೂಡ ನಿಶ್ಚಯಿಸಿರುವರು: ಕೆಲವರು ಹತ್ತು ವರ್ಷಗಳೆಂದೂ, ಕೆಲವರು ಐದು ವರ್ಷಗಳೆಂದೂ, ಕೆಲವರು ಒಂದು ವರ್ಷವೆಂದೂ ಹೇಳುತ್ತಿರುವರಾಗಲೀ ಅಮೇರಿಕಾದ ರಾಜಕೀಯವೇತ್ತ ಡ್ಯೂ ಪಿಯರ್ಸ್ ಇನ್ನೊಂದು ತಿಂಗಳೊಳಗಾಗಿಯೇ ಮೂರನೆಯ ಪ್ರಪಂಚ ಯುದ್ಧವು ಬರಲಿರುವುದಾಗಿ ಭವಿಷ್ಯವನ್ನು ನುಡಿದಿರುವರು. ಯುದ್ಧವನ್ನು ಪ್ರಾರಂಭಿಸಲು ಅಗ್ರತಾಂಬೂಲವನ್ನು ಸ್ವಲ್ಪ ರಷ್ಯಾ ತೆಗೆದುಕೊಳ್ಳುವುದಂತೆ. ಟೆಹರಾನ್ ಒಡಂಬಡಿಕೆಯಂತೆ ರಷ್ಯಾ ದೇಶವು ಇನ್ನೂ ತನ್ನ ಕರಡಿ ಹಿಡಿತವನ್ನು ಬಿಡದೆ ಇದೆ. ತುರ್ಕಿಯ ಸ್ವಲ್ಪ ಭಾಗವನ್ನು ಕೂಡ ರಷ್ಯಾ ಕೋರುತ್ತಿದೆ. ತನ್ನ ಕೋರಿಕೆಯು ಈಡೇರದಲ್ಲಿ ತುರ್ಕಿಯ ಮೇಲೆ ದಂಡಯಾತ್ರೆಯನ್ನು ಮಾಡಲು ಸಿದ್ಧವೆಂದು ರಷ್ಯಾ ಹೇಳುತ್ತಿದೆ. ಡ್ಯೂ ಪಿಯರ್ಸನ್ನರವರ ಊಹೆಯಂತೆ ತುರ್ಕಿಯೊಂದಿಗೆ ಬ್ರಿಟಿಷ್ ಅಮೇರಿಕಾಗಳು ಸೇರಿ ಹೋರಾಡುವುವು. ಪ್ರಪಂಚ ಜಾತಕವು ಇನ್ನೂ ನಷ್ಟ ಜಾತಕವು ಇನ್ನೂ ನಷ್ಟ ಜಾತಕವಾಗಿರುವಂತೆಯೇ ಕಾಣುತ್ತಿದೆ. ಪ್ರಪಂಚಕ್ಕೆ ಮುಂದೆ ಯುಗಾದಿ ದೀಪಾವಳಿಗಳು ಬರುತ್ತವೆಯೇ, ಮಾರಿ ಹಬ್ಬ ಹೋಳಿ ಹಬ್ಬ ಬರುತ್ತವೆಯೋ ನೋಡಬೇಕು. ಶಿವರಾತ್ರಿ ಭೀಷ್ಮ ಪಂಚಕದಂತಹ ಮಹಾ ವ್ರತವನ್ನು ಅಹಾರಾಭಾವದಿಂದ ವಿಧಿಯಿಲ್ಲದೆ ಅವಲಂಬಿಸುತ್ತಿರುವ ಭಾರತೀಯರಿಗೆ ಇನ್ನೂ ಯಾವ ಯಾವ ಕಷ್ಟಗಳು ಬರಲಿವೆಯೋ ಬಲ್ಲವರಾರು ?

ಚಿನ್ನಾ ಬೆಳ್ಳಿ ಧಾರಣೆ

ಸವರನ್ 1 ಕ್ಕೆ	ರೂ. 64-0-0
ಚಿನ್ನ ತೊಲ 1 ಕ್ಕೆ	94-12-0
ಬೆಳ್ಳಿ	1-9-0

ಮಂತ್ರಿಮಂಡಲ ನಿರ್ಮಾಣ

ಬಕ್ನೋ ಮಾ 24— ಸಂಯುಕ್ತ ಪ್ರಾಂತ್ಯದಲ್ಲಿ ಕಾಂಗ್ರೆಸ್-ಲೀಗ್ ಮಿಶ್ರ ಮಂಡಲಿ ಸ್ಥಾಪಿಸಿ ಮಾಡಲು ಮಾ || ಅಜಾದರು. ಲೀಗಿಗೆ ಆಹ್ವಾನವನ್ನು ಇತ್ತಿರುವರು.

ಲಾಹೋರ್ ಮಾ 25 — ಜಿನ್ನಾರವರು ವಿಮಾನದಲ್ಲಿ ಡೆಲ್ಲಿಗೆ ತೆರಳಿದಾಗ ಆಸೋಸಿಯೇಟೆಡ್ ಪ್ರೆಸ್ ಪ್ರತಿನಿಧಿಯೊಂದಿಗೆ ಈ ರೀತಿ ತಿಳಿಸಿದರು— ನಾನು ಪುಂಜಾಬಿನಿಂದ ಸನ್ನಡತೆಯಾಕಿ ಸ್ಥಾನ ಪಡೆಯುಲು ಹೋರಾಡಲು ಆಶೆ ಮತ್ತು ಧೈರ್ಯದ ಸಂದೇಶವನ್ನು ಮುಸ್ಲಿಂ ಭ್ರಾತೃತ್ವಕ್ಕೆ ತೆಗೆದುಕೊಂಡು ಹೋಗುವೆನು.

ಜೊಂಬಾಯಿ ಪ್ರಾಂತ್ಯದಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ಸ್ಥಾಪನೆಯಾಗಿ ಶ್ರೀ ಖೇರು ಮುಖ್ಯಮಂತ್ರಿಗಳಾಗುವರೆಂದು ಹೇಳಲಾಗಿದೆ.

ಮೈಸೂರು ಸರಕಾರದವರು ಹೊಸದಿಸಿರುವ ಆಹಾರ ಹೋಟಿ ಅಜ್ಞಿಯಿತ ಹೋಟಲಿನ ಕಾಲ ಮಿತಿಗೊಳಿಸಲಾಗಿದೆ ಸಾರ್ವಜನಿಕ ಕೂಟ ಮದುವೆ ಮೊದಲಾದ ಸಮಾರಂಭದಲ್ಲಿ ಸತ್ಕಾರ ಪಡೆಯುವವರ ಸಂಖ್ಯೆ ನಿಷ್ಕರ್ಷಿಸಲಾಗಿದೆ.

ಮದರಾಸಿನ ಕುದುರೆ ಜೂಜಿನ ಸಂಬಂಧದ ಬಾಜೀ ತೆಗೆದುಕೊಳ್ಳುವವರ ಅಂಗಡಿಗಳಿಂದ ಈ ಸಾರಿ ಬಾಜೀ ತೆರಿಗೆ ವಸೂಲಾಗಿದೆ.

Specific for Asthma

The world reknowned remedy for Asthma 'Lachmana Buti' cures Asthma radically by one single dose taken on full-moon (16-4-46)

Correspondence in English please.

Sebak, Sri Janaki Sewasram Chitrakot.) U. P.)

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಹಸಕ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸಕ
ಶಿವರಾಂಪೇಟೆ ಮೈಸೂರು.

ಸುಖ ಆರೋಗ್ಯ ಆನಂದದಾಯಕ ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನ್ನಾಹನ ಸ್ಥಳಾವಾಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧವಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಸಿದ್ಧ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸೇರು ಸ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುಂಟಿಸ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವಂಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಮೈಸೂರು ಸಿಟಿ ರೇಷನಿಂಗ್

No. R 1-61/45-46

1946 ನೇ ಮಾರ್ಚ್ ತಿಂಗಳ 31 ನೇ ತಾರೀಖು ಭಾನುವಾರದ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸಬ್ ಗೋಡೌನ್ ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ, ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ.

(ಸಹಿ) ಟಿ. ವಿ ರೆಡ್ಡಿ,
ರೇಷನಿಂಗ್ ಆಫೀಸರ್,
18-3-46 ಮೈಸೂರು.

At Opera —
Morning Shows
From 29-3-46
Ice Capades Revue
3 ನೇ ವಾರ
ಮೆಹತಾಬ್ — ಸುರೇಂದ್ರ
ಪಾತ್ರವಹಿಸಿರುವ
.... ವಿಶ್ವಾಸ್....
ಮುಂದಿನ ವಿನೋದ—
ಭಕ್ತ ಕಲಾತಿ

At Ranjit
3rd Week
Shirin Farad
— with —
RAGINI & JAYANT

Get Medical Diplomas

At home: — Ayurvedic Homeopathic, Unani, etc., Prospectus Free.

Old Indian Medical College
Kotgarh, Simla